ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103
ದೂರವಾಣಿ: 0816–2254546, 0816–2255596, 0816–2255597 ಫ್ಯಾಕ್ಸ್: 0816–2270719

ಸಂಖ್ಯೆ:ತು.ವಿ/2920/ದ.ಆ:ಖ.ಕೋ:2022–23/ 2751 **ದಿನಾಂಕ:06.08.2022**

ಮರು ದರಪಟ್ಟಿ ಆಹ್ವಾನ (ವಿ.ವಿ ವೆಬ್ ಸೈಟ್ ಮುಖಾಂತರ)

ವಿಷಯ: ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಗಣಕಯಂತ್ರ ವಿಭಾಗಕ್ಕೆ Laptopಅನ್ನು ಸರಬರಾಜು ಪಡೆಯಲು ದರಪಟ್ಟಿಗಳನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ಇವರ ಮನವಿ ಪತ್ರ ಸಂಖ್ಯೆ: ತು.ವಿ:ಪ.ವಿ:ವಿ.ನಿ–07/2021–22,625,ದಿನಾಂಕ:10.11.2021.
2. ವಿಶ್ವವಿದ್ಯಾನಿಲಯದ ದರಪಟ್ಟಿ ಆಹ್ವಾನ (ವಿ.ವಿ.ವೆಬ್‌ಸೈಟ್ ಮುಖಾಂತರ) ಪತ್ರ ಸಂಖ್ಯೆ:ತು.ವಿ/ 2920/ದ.ಆ:ಖ.ಕೋ:2022–23/509,ದಿನಾಂಕ:21.05.2022.
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:04.08.2022(ಕಂಡಿಕೆ–145).

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01) ರ ಮನವಿಯ ಮೇರೆಗೆ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಗಣಕಯಂತ್ರ ವಿಭಾಗಕ್ಕೆ 01 **Laptop** ಅನ್ನು ಸರಬರಾಜು ಪಡೆಯಲು ಕೆಳಕಂಡ ಷರತ್ತುಗಳಿಗೊಳಪಟ್ಟು ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸುತ್ತಿದ್ದು, **Laptop** ನ ಮಾದರಿ, ವೈಶಿಷ್ಟತೆ ವಿವರಗಳು ಈ ಕೆಳಕಂಡಂತಿವೆ.

Sl. No.	Particulars	Specifications	Qty	Rate to be quoted per Laptop (Incl. of all taxes)
01	Laptop	11th Gen Core i7, 16GB RAM, 2TB HDD, Windows 10 professional, Graphic card.	01 No.s	

ಷರತ್ತುಗಳು:

1. ಮುಚ್ಚಿದ ಲಕೋಟೆಯ ಮೇಲೆ "ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಗಣಕಯಂತ್ರ ವಿಭಾಗಕ್ಕೆ Laptop" ಅನ್ನು ಸರಬರಾಜು ಮಾಡಲು ದರಪಟ್ಟಿ" ಎಂದು ನಮೂದಿಸುವುದು.
2. ದರಪಟ್ಟಿಗಳನ್ನು ಸಂಬಂಧಿತ ಸಂಸ್ಥೆಯವರು ತಮ್ಮ ಅಂಗೀಕೃತ ಪತ್ರ (Official Letterhead) ದಲ್ಲಿಯೇ ಸಲ್ಲಿಸತಕ್ಕದ್ದು.
3. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, **ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು–572 103,** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
4. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ:17.08.2022 ಅಪರಾಹ್ನ 12.00 ಗಂಟೆ.**
5. ದರಪಟ್ಟಿಯನ್ನು **ದಿನಾಂಕ:18.08.2022** ರಂದು **ಅಪರಾಹ್ನ 03.30** ಕ್ಕೆ ತೆರೆಯಲಾಗುವುದು.
6. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ಕಡ್ಡಾಯವಾಗಿ ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
7. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮತ್ತು ಸಾಗಾಣಿಕಾ ವೆಚ್ಚವನ್ನು ಒಳಗೊಂಡಿರತಕ್ಕದ್ದು.
8. **ಸಾಮಗ್ರಿಗಳ ಪ್ರಮಾಣಗಳನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.**
9. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
10. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
11. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.

(ಮು.ತಿ.ನೋ)

12. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
13. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ,

ಉಪಕುಲಸಚಿವರು
(ಸಾಮಾನ್ಯ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:
1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು).
3. ಕಚೇರಿ ಪ್ರತಿ.